# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1062(1206) |
| ಮಾನ್ಯ ಸದಸ್ಯರ ಹೆಸರು | ಶ್ರೀ ಆರ್.ಬಿ. ತಿಮ್ಮಾಪೂರ |
| ಉತ್ತರಿಸುವ ಸಚಿವರು | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 07.03.2022 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಡಿ ನ್ಯಾಯಾಲಯ, ಅಮಾನತ್ತು, ಇಲಾಖಾ ವಿಚಾರಣೆ ಹಾಗೂ ದೂರು ಪ್ರಕರಣಗಳ ಕುರಿತಂತೆ ಅನುದಾನಿತ ಕಾಲೇಜು ಹಾಗೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರಿಗೆ ಸಂಬಂಧಿಸಿದ ಪ್ರಕರಣಗಳು ಎಷ್ಟೆಷ್ಟು? ಎಷ್ಟು ವರ್ಷಗಳಿಂದ ಬಾಕಿ ಇರುತ್ತದೆ (ಪ್ರತ್ಯೇಕ ವಿವರಗಳನ್ನು ಒದಗಿಸುವುದು) | **ಕಾಲೇಜು ಶಿಕ್ಷಣ ಇಲಾಖೆ**<br><br>ಅನುದಾನಿತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು, ಒಟ್ಟು 228 ಪ್ರಕರಣಗಳು ಬಾಕಿ ಇರುತ್ತವೆ. ಬಾಕಿ ಇರುವ ಸದರಿ ಪ್ರಕರಣಗಳ ವರ್ಷವಾರು ಮಾಹಿತಿಯು ಕೆಳಕಂಡಂತಿದೆ. |

| ವರ್ಷ | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|
| 2010 | 2 |
| 2011 | 7 |
| 2012 | 6 |
| 2013 | 17 |
| 2014 | 15 |
| 2015 | 22 |
| 2016 | 33 |
| 2017 | 21 |
| 2018 | 26 |
| 2019 | 24 |
| 2020 | 17 |
| 2021 | 38 |
| **ಒಟ್ಟು** | **228** |

ಅನುದಾನಿತ ಕಾಲೇಜು ಹಾಗೂ ಸಂಸ್ಥೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ /ನೌಕರರಿಗೆ ಸಂಬಂಧಿಸಿದ ಅಮಾನತ್ತು, ಇಲಾಖಾ ವಿಚಾರಣಾ ಹಾಗೂ ದೂರು ಪ್ರಕರಣಗಳ ಮಾಹಿತಿಯು ಕೆಳಕಂಡಂತಿದೆ.

| ಅಮಾನತ್ತು | ಇಲಾಖಾ ವಿಚಾರಣೆ | ದೂರುಗಳು (2021/22 ಸಾಲಿನಲ್ಲಿ ಸ್ವೀಕೃತಿ) |
|---|---|---|
| 06 | 06 | 53 |

<table>
<tr>
<td></td>
<td></td>
<td>
<u>ತಾಂತ್ರಿಕ ಶಿಕ್ಷಣ ಇಲಾಖೆ</u><br><br>
ರಾಜ್ಯದ ಉನ್ನತ್ತ ಶಿಕ್ಷಣ ಇಲಾಖೆಯಡಿ ನ್ಯಾಯಾಲಯ, ಅಮಾನತ್ತು, ಇಲಾಖಾ ವಿಚಾರಣೆ ಹಾಗೂ ದೂರು ಪ್ರಕರಣಗಳ ಕುರಿತಂತೆ ಅನುದಾನಿತ ಕಾಲೇಜು ಹಾಗೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರಿಗೆ ಸಂಬಂಧಿಸಿದ ಒಟ್ಟು ಪ್ರಕಣಗಳ ಸಂಖ್ಯೆ: 21<br>
(ಅಮಾನತ್ತು/ ಇಲಾಖಾ ವಿಚಾರಣೆ ಹಾಗೂ ದೂರು ಪ್ರಕರಣಗಳು-16 (ಅನುಬಂಧ-ಎ)<br>
(ನ್ಯಾಯಾಲಯ ಪ್ರಕರಣಗಳು - 05 ) (ಅನುಬಂಧ-ಬಿ)
</td>
</tr>
<tr>
<td>ಆ)</td>
<td>ಈ ಪ್ರಕರಣಗಳು ಯಾವ ಯಾವ ಹಂತಗಳಲ್ಲಿವೆ</td>
<td>
ಕಾಲೇಜು ಶಿಕ್ಷಣ ಇಲಾಖೆ<br><br>
228 ನ್ಯಾಯಾಲಯ ಪ್ರಕರಣಗಳ ಕುರಿತಂತೆ ಅವುಗಳ ವಿವಿಧ ಹಂತವನ್ನು ಈ ಕೆಳಕಂಡಂತೆ ನೀಡಲಾಗಿದೆ.
<table>
<tr><th>ಕಂಡಿಕೆವಾರು ವರದಿಯನ್ನು ನೀಡಬೇಕಾಗಿರುವುದು</th><th>ಕಂಡಿಕೆವಾರು ವರದಿಯನ್ನು ಈಗಾಗಲೇ ಸಲ್ಲಿಸಿರುವುದು</th><th>ನ್ಯಾಯಾಲಯದಲ್ಲಿ ಆಕ್ಷೇಪಣಾ ಹೇಳಿಕೆಯಲ್ಲಿ ಸಲ್ಲಿಸಿರುವುದು</th></tr>
<tr><td>1</td><td>0</td><td>1</td></tr>
<tr><td>0</td><td>3</td><td>4</td></tr>
<tr><td>0</td><td>2</td><td>4</td></tr>
<tr><td>0</td><td>7</td><td>10</td></tr>
<tr><td>4</td><td>7</td><td>4</td></tr>
<tr><td>3</td><td>10</td><td>9</td></tr>
<tr><td>9</td><td>21</td><td>3</td></tr>
<tr><td>4</td><td>11</td><td>6</td></tr>
<tr><td>7</td><td>14</td><td>5</td></tr>
<tr><td>8</td><td>13</td><td>3</td></tr>
<tr><td>5</td><td>10</td><td>2</td></tr>
<tr><td>22</td><td>13</td><td>3</td></tr>
<tr><td>ಒಟ್ಟು 63</td><td>111</td><td>54</td></tr>
</table>
<table>
<tr><th>ಅಮಾನತ್ತು</th><th>ಇಲಾಖಾ ವಿಚಾರಣೆ</th><th>ದೂರುಗಳು (2021/22 ಸಾಲಿನಲ್ಲಿ ಸ್ವೀಕೃತಿ)</th></tr>
<tr><td>06</td><td>06</td><td>53</td></tr>
</table>
ಮೇಲ್ಕಂಡ 06 ಅಮಾನತ್ತು ಪ್ರಕರಣಗಳಲ್ಲಿ ಆಡಳಿತ ಮಂಡಳಿಯೇ ಶಿಸ್ತು ಪ್ರಾಧಿಕಾರವಾಗಿರುವುದರಿಂದ, ಆಡಳಿತ ಮಂಡಳಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ವಯ 04 ಪ್ರಕರಣಗಳಲ್ಲಿ ದಂಡನೆಯನ್ನು ವಿಧಿಸಿದ್ದು, ಸದರಿಯವರುಗಳು ಆಡಳಿತ ಮಂಡಳಿ ವಿಧಿಸಿರುವ ದಂಡನೆಯ ವಿರುದ್ಧ ನ್ಯಾಯಾಲಯದ ಮೊರೆ ಹೋಗಿರುತ್ತಾರೆ. 01 ಪ್ರಕರಣದಲ್ಲಿ ಆಡಳಿತ ಮಂಡಳಿಯು ನಿಯಮಾನುಸಾರ ವಿಚಾರಣೆ ನಡೆಸಿರುವುದಿಲ್ಲವೆಂದು ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ ಹಾಗೂ 01 ಪ್ರಕರಣದಲ್ಲಿ ಆರೋಪಿತರು ಮರಣ ಹೊಂದಿದ್ದು, ಆಡಳಿತ ಮಂಡಳಿಯು ಸದರಿ ಪ್ರಕರಣದ ಕುರಿತು ಅಂತಿಮ ನಿರ್ಣಯ ಕೈಗೊಳ್ಳಬೇಕಾಗಿದೆ.
</td>
</tr>
</table>

| | | |
|---|---|---|
| | | ಸಾಮಾನ್ಯ ದೂರುಗಳಿಗೆ ಸಂಬಂಧಿಸಿದಂತೆ, ಆಗಿಂದಾಗೆ, ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ದೂರುಗಳನ್ನು ರವಾನಿಸಿ, ಅವರ ಹಂತದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.<br><br>ತಾಂತ್ರಿಕ ಶಿಕ್ಷಣ ಇಲಾಖೆಯ ಮಾಹಿತಿಗಳನ್ನು ಅನುಬಂಧದಲ್ಲಿ ನಮೂದಿಸಲಾಗಿದೆ. |
| ಇ) | ಎಷ್ಟು ಸಮಯದೊಳಗೆ ಈ ಎಲ್ಲಾ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮ ಜರುಗಿಸಲಾಗುವುದು. | ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983, ನಿಯಮ 46 ರ ಪ್ರಕಾರ ಆಡಳಿತ ಮಂಡಳಿಯು ಶಿಸ್ತು ಪ್ರಾಧಿಕಾರವಾಗಿದ್ದು, ಶಿಸ್ತು ಪ್ರಾಧಿಕಾರವು ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲಿಸಿ, ಶಿಸ್ತು ಪ್ರಕರಣಗಳನ್ನು ನಿರ್ದಿಷ್ಟ ಕಾಲಾವಧಿಯೊಳಗೆ ಇತ್ಯರ್ಥಗೊಳಿಸುವಂತೆ ಆಡಳಿತ ಮಂಡಳಿಗಳಿಗೆ ನಿರ್ದೇಶನ ನೀಡಲಾಗಿದ್ದು, ಪ್ರಕರಣಗಳನ್ನು ತುರ್ತಾಗಿ ಇತ್ಯರ್ಥಪಡಿಸಲು ಕ್ರಮ ಜರುಗಿಸಲಾಗುವುದು. |

ಇಡಿ 4 ಅಅವಿ 2022

**(ಡಾ.ಅಶ್ವತ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐ.ಟಿ ಮತ್ತು ಬಿಟಿ ವಿಜ್ಞಾನ,
ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಅನುಬಂಧ- ಎ

| ಅನುಬಂಧ-ಎ | | |
|---|---|---|
| ಕ್ರ. ಸಂ | ವಿಷಯ | ಪ್ರಸ್ತುತ ಸ್ಥಿತಿ |
| 1. | ಶ್ರೀ ಹೆಚ್.ಎಸ್ ಪ್ರಕಾಶ್, ಗ್ರೂಪ್-ಡಿ, ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು, ಮಂಡ್ಯ ಇವರನ್ನು ಅವಿಧೇಯತೆ, ದುರ್ನಡತೆ ಹಾಗೂ ಅನಧಿಕೃತ ಗೈರು ಹಾಜರಿ ಹಿನ್ನೆಲೆಯಲ್ಲಿ ಇವರನ್ನು ಆಡಳಿತ ಮಂಡಳಿಯು ವಜಾಗೊಳಿಸಿದ್ದು, ಇದಕ್ಕೆ ಅನುಮೋದನೆ ನೀಡಲು ಕೋರಿರುತ್ತಾರೆ. | ಹೆಚ್. ಎಸ್. ಪ್ರಕಾಶ್ ಇವರನ್ನು ವಜಾಗೊಳಿಸಿರುವುದಕ್ಕೆ ಸಂಬಂಧಿಸಿದಂತೆ, ಪ್ರಾಂಶುಪಾಲರಿಂದ ವಿವರವಾದ ವರದಿಯನ್ನು ಸಲ್ಲಿಸಲು ತಿಳಿಸಲಾಗಿದೆ. |
| 2. | ಶ್ರೀ ರಮೇಶ್ ಕುಮಾರ್ ಮತ್ತು ರಮೇಶ್ ಮೂರ್ತಿ , ವಕೀಲರು ಇವರು ಬಿ.ಎಂ.ಎಸ್ ಇಂಜಿನಿಯರಿಂಗ್ ಕಾಲೇಜು ಮತ್ತು ಆಡಳಿತ ಮಂಡಳಿ ವಿರುದ್ಧ ನಿಯಮಬಾಹಿರವಾಗಿ ಪ್ರವೇಶಾತಿ, ಹಣ ದುರುಪಯೋಗ ಹಾಗೂ ಕಾನೂನು ಉಲ್ಲಂಘನೆ ಸಲ್ಲಿಸಿರುವ ದೂರಿನ ಬಗ್ಗೆ. | ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯವರಿಗೆ ದೂರಿನ ಬಗ್ಗೆ ವರದಿ ನೀಡುವಂತೆ ಪತ್ರ ಬರೆಯಲಾಗಿದೆ |
| 3. | ಶ್ರೀಮತಿ ಭಾವನ ಎಂ.ಬಿ., ಸಹಾಯಕ ಪ್ರಾಧ್ಯಾಪಕರು, ಎಂ.ಸಿ.ಇ ಹಾಸನ, ಇವರು ಶ್ರೀ ಪುರುಷೋತ್ತಮ ವಿಭಾಗದ ಮುಖ್ಯಸ್ಥರು (ಇ&ಇ) ರವರ ವಿರುದ್ಧ ಲೈಂಗಿಕ ಕಿರುಕುಳದ ಬಗ್ಗೆ ಸಲ್ಲಿಸಿರುವ ದೂರಿನ ಬಗ್ಗೆ. | ಲೈಂಗಿಕ ಕಿರುಕುಳ ದೂರು ನಿವಾರಣಾ ಸಮಿತಿಯ ವರದಿ ನಿರೀಕ್ಷಿಸಲಾಗಿದೆ. |
| 4. | ಶ್ರೀ ಸದಾಶಿವ ಎಸ್ ಕೆಂಭಾವಿ, ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು ಬಾಗಲಕೋಟೆ, ಇವರು ದಿನಾಂಕ: 28.07.2020 ರವರು ಪ್ರಾಂಶುಪಾಲರು ಮತ್ತು ಇತರೆ ಸಿಬ್ಬಂದಿಯವರ ವಿರುದ್ಧ ಸಲ್ಲಿಸಿರುವ ದೂರಿನ ಬಗ್ಗೆ. | ಆಡಳಿತ ಮಂಡಳಿಯವರಿಗೆ ಶಿಸ್ತು ಕ್ರಮ ಜರುಗಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. |
| 5. | ಶ್ರೀ ಹೆಬ್ಬಾಳ್, ಪ್ರಾಂಶುಪಾಲರು, ಪಿ.ಡಿ.ಎ ಇಂಜಿನಿಯರಿಂಗ್ ಕಾಲೇಜು, ಕಲಬುರಗಿ, ಇವರ ಕೆ.ಪಿ.ಎಸ್.ಸಿ ಯ ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳ ನೇಮಕಾಗಿ ಪರೀಕ್ಷೆಯ ಸಂದರ್ಭದಲ್ಲಿ ಪರೀಕ್ಷಾ ಕೇಂದ್ರದಲ್ಲಿನ ಲೋಪದ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ. | ವಿಚಾರಣೆ ನಡೆಸಿ, ವರದಿ ನೀಡುವಂತೆ ಆಡಳಿತ ಮಂಡಳಿಗೆ ಪತ್ರ ಬರೆಯಲಾಗಿದೆ |
| 6. | ಶ್ರೀ ಆರ್. ಕೇಶವಮೂರ್ತಿ ಪ್ರಾಂಶುಪಾಲರು, ಕೆವಿ.ಜಿ ಪಾಲಿಟೆಕ್ನಿಕ್ ಸುಳ್ಯ ಇವರನ್ನು ಸೇವೆಯಿಂದ ವಜಾಗೊಳಿಸಿರುವ ಬಗ್ಗೆ. | ಶ್ರೀ ಆರ್. ಕೇಶವಮೂರ್ತಿ, ಇವರನ್ನು ಆಡಳಿತ ಮಂಡಳಿಯು ವಜಾಗೊಳಿಸಿರುವುದಕ್ಕೆ ಅನುಮೋದನೆ ನೀಡುವ ಸಂಬಂಧವಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಸರ್ಕಾರವು ಕೇಳಿರುವ ಮಾಹಿತಿ ಮತ್ತು ದಾಖಲೆಗಳೊಂದಿಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತಿದೆ. |
| 7. | ಶ್ರೀ ಎಂ.ಡಿ.ಅಶೋಕ, ಉಪನ್ಯಾಸಕರು ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ ಇವರ ವಿರುದ್ಧದ ಆರೋಪಗಳ ಹಿನ್ನೆಲೆಯಲ್ಲಿ ದಂಡನೆ ವಿಧಿಸಿರುವುದಕ್ಕೆ ಅನುಮೋದನೆ ಕೋರಿರುವ ಬಗ್ಗೆ. | ಆಡಳಿತ ಮಂಡಳಿಯ ಆದೇಶವನ್ನು ಪ್ರಶ್ನಿಸಿ ಸದರಿ ನೌಕರರು ಮಾನ್ಯ ನ್ಯಾಯಾಲಯದಲ್ಲಿ (ಇ.ಎ.ಟಿ) ಅರ್ಜಿ ಸಲ್ಲಿಸಿದ್ದು ನ್ಯಾಯಾಲಯವು ಆಡಳಿತ ಮಂಡಳಿಯ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ. ನ್ಯಾಯಾಲಯದ ಅಂತಿಮ ಆದೇಶ ಬಂದ ನಂತರ ಕ್ರಮ ವಹಿಸಲಾಗುವುದು. |

| | | |
|---|---|---|
| 8. | ಶ್ರೀ ಗುರುರಾಜ.ಎಲ್ ಉಪನ್ಯಾಸಕರು, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ ಪಿ.ವಿ.ಪಿ ಪಾಲಿಟೆಕ್ನಿಕ್, ಬೆಂಗಳೂರು ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ | ಪ್ರಾಂಶುಪಾಲರ ಹಂತದಲ್ಲಿ ಶಿಸ್ತು ಕ್ರಮ ಜಾರಿಯಲ್ಲಿರುತ್ತದೆ. |
| 9. | ಶ್ರೀ ಶಿವಕುಮಾರ್.ಪಿ., ಮೆಕ್ಯಾನಿಕ್, ಇ&ಸಿ ವಿಭಾಗ ಶ್ರೀ ವೆಂಕಟೇಶ್ವರ ಪಾಲಿಟೆಕ್ನಿಕ್ ಬೆಂಗಳೂರು ಇವರನ್ನು ಸೇವೆಯಿಂದ ವಜಾ ಮಾಡಿರುವ ಬಗ್ಗೆ ಅನುಮೋದನೆ ನೀಡುವಂತೆ ಆಡಳಿತ ಮಂಡಳಿಯವರು ಪತ್ರ ಬರೆದಿರುವ ಕುರಿತು. | ಇವರನ್ನು ಪುನರ್ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಆಡಳಿತ ಮಂಡಳಿಯಿಂದ ಪತ್ರ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ. |
| 10. | ಶ್ರೀ ಹೆಚ್. ಪ್ರಕಾಶ್ ಪ್ರ.ದ.ಸ, ಪಿ.ವಿ.ಪಿ ಬೆಂಗಳೂರು ಇವರ ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ಪುನರ್ ನೇಮಕ ಮಾಡಿಕೊಳ್ಳುವಂತೆ ಕೋರಿರುವ ಬಗ್ಗೆ | ಅಮಾನತು ತೆರವುಗೊಳಿಸಿ ಸೇವೆಯಲ್ಲಿ ಪುನರ್ ಸ್ಥಾಪಿಸಿರುವುದಕ್ಕೆ ಅನುಮೋದನೆ ನೀಡಿ, ತುರ್ತಾಗಿ ವಿಚಾರಣೆ ಮುಗಿಸಿ ವರದಿ ಸಲ್ಲಿಸುವಂತೆ ಆಡಳಿತ ಮಂಡಳಿಗೆ ಪತ್ರ ಬರೆಯಲಾಗಿದೆ. |
| 11. | ಶ್ರೀ ಅನಿಲ್‌ಕುಮಾರ್, ಅಟೆಂಡರ, ವೆಂಕಟೇಶ್ವರ ಪಾಲಿಟೆಕ್ನಿಕ್ ಬೆಂಗಳೂರು ಇವರ ಅನಧಿಕೃತ ಗೈರುಹಾಜರಿ ಸಂಬಂಧ ಇಲಾಖಾ ವಿಚಾರಣೆ ನಡೆಯುತ್ತಿದ್ದು, ಸದರಿಯವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಕೋರಿರುತ್ತಾರೆಂದು ಆಡಳಿತ ಮಂಡಳಿಯವರು ಮಾಹಿತಿ ನೀಡಿರುವ ಬಗ್ಗೆ. | ಪ್ರಸ್ತುತ ಸದರಿ ನೌಕರರನ್ನು ಆಡಳಿತ ಮಂಡಳಿಯು ಇಲಾಖಾ ವಿಚಾರಣೆಯನ್ನು ನಡೆಸಿ ಸೇವೆಯಿಂದ ವಜಾ ಮಾಡಿದ್ದು, ಈ ಕ್ರಮಕ್ಕೆ ಅನುಮೋದನೆಯನ್ನು ನೀಡುವಂತೆ ನಿರ್ದೇಶನಾಲಯಕ್ಕೆ ಪತ್ರ ಬರೆದಿದ್ದು, ಮುಂದಿನ ಕ್ರಮದ ಬಗ್ಗೆ ಸರ್ಕಾರದ ಮಾರ್ಗದರ್ಶನ ಕೋರಲಾಗಿದೆ. |
| 12. | ಡಾ. ಉದಯಶಂಕರ್, ಪ್ರಾಧ್ಯಾಪಕರು, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ಮೈಸೂರು, ಇವರು ಸರ್ಕಾರದ ಪೂರ್ವಾನುಮತಿ ಇಲ್ಲದೇ ವಿದೇಶ ಪ್ರವಾಸ ಕೈಗೊಂಡಿರುವ ಬಗ್ಗೆ. | ಸರ್ಕಾರದ ಪೂರ್ವಾನುಮತಿ ಇಲ್ಲದೇ ವಿದೇಶಿ ಪ್ರವಾಸ ಕೈಗೊಂಡಿದ್ದು ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಕ್ರಮವಹಿಸುವಂತೆ ಸಂಬಂಧಪಟ್ಟ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ಮೈಸೂರು, ಪ್ರಾಚಾರ್ಯರಿಗೆ ಇವರಿಗೆ ಪತ್ರ ಬರೆಯಲಾಗಿದೆ. |
| 13. | ಪಿಇಎಸ್ ಇಂಜಿನಿಯರಿಂಗ್ ಕಾಲೇಜು ಮಂಡ್ಯ ಇಲ್ಲಿನ ಅಧಿಕಾರಿಗಳು ಕೋಟ್ಯಾಂತರ ಹಣ ದುರುಪಯೋಗ ಮಾಡಿಕೊಂಡಿರುವ ಕುರಿತ ದೂರಿನ ಬಗ್ಗೆ. | ಈ ಬಗ್ಗೆ ತನಿಖೆ ನಡೆಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. |
| 14. | ಶ್ರೀ ರವಿ ಯಮಕನಮರಡಿ, ವಿಭಾಗ ಮುಖ್ಯಸ್ಥರು, ಆಟೋ ವಿಭಾಗ, ಜೆ.ಎಸ್.ಎಸ್. ಪಾಲಿಟೆಕ್ನಿಕ್ ಧಾರವಾಡ, ಇವರ ವಿರುದ್ಧದ ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುತ್ತಾರೆಂಬ ದೂರಿನ ಬಗ್ಗೆ. | ದೂರಿನ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಪ್ರಾಂಶುಪಾಲರಿಗೆ ಪತ್ರ ಬರೆಯಲಾಗಿದೆ. |
| 15. | ಶ್ರೀ ಸಾಕಿಶ್ಯಾಮ್, ಪ್ರಾಧ್ಯಾಪಕರು, ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು, ಇವರನ್ನು ಆಡಳಿತ ಮಂಡಳಿಯು ಅಮಾನತ್ತುಗೊಳಿಸಿರುವ ಬಗ್ಗೆ. | ಶ್ರೀ ಸಾಕಿಶ್ಯಾಮ್ ಇವರನ್ನು ಸೇವೆಯಲ್ಲಿ ಪುನರ್ ಸ್ಥಾಪನೆಗೊಳಿಸಿದ್ದು ಇವರ ಮೇಲಿನ ಆರೋಪಗಳ ಬಗ್ಗೆ, ವಿಚಾರಣೆ ನಡೆಸಿ, ವರದಿ ಸಲ್ಲಿಸಲು ಆಡಳಿತ ಮಂಡಳಿಗೆ ಸೂಚಿಸಲಾಗಿದೆ. |

| | | |
|---|---|---|
| 16. | ಶ್ರೀ ಅಕ್ಬರ್ ಬಿಳೇಕುದ್ರಿ, ಉಪನ್ಯಾಸಕರು ಮತ್ತು ಎ ಎ ಕಿತ್ತೂರ, ಕಚೇರಿ ಅಧೀಕ್ಷಕರು, ಇವರುಗಳ ವಿರುದ್ಧದ ದೂರಿನ ಬಗ್ಗೆ. | ಸದರಿ ನೌಕರರ ವಿರುದ್ಧ ಕ್ರಮ ಜರುಗಿಸಲು ಆಡಳಿತ ಮಂಡಳಿಗೆ ಹಲವು ಬಾರಿ ಸೂಚಿಸಿದ ನಂತರವೂ ಯಾವುದೇ ಕ್ರಮ ಜರುಗಿಸದ ಕಾರಣ ಸಂಸ್ಥೆಗೆ ನೀಡಲಾಗುತ್ತಿರುವ ವೇತನಾನುದಾನವನ್ನು ಸರ್ಕಾರವು ಹಿಂಪಡೆದಿದ್ದು, ಇದನ್ನು ಪ್ರಶ್ನಿಸಿ ಸಂಸ್ಥೆಯ ಸಿಬ್ಬಂದಿಗಳು ಮಾನ್ಯ ಉಚ್ಛ ನ್ಯಾಯಾಲಯ ಧಾರವಾಡ ಪೀಠ ಇಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ. ನ್ಯಾಯಾಲಯದ ಅಂತಿಮ ಆದೇಶ ಬಂದ ನಂತರ ಮುಂದಿನ ಕ್ರಮ ವಹಿಸಲಾಗುವುದು. |

ಅನುಬಂಧ - ೨೨.

| ಅನುಬಂಧ- ಬಿ | | |
|---|---|---|
| ಕ್ರ.ಸಂ | ನ್ಯಾಯಾಲಯ ಪ್ರಕರಣದ ವಿವರ | ಪ್ರಸ್ತುತ ಹಂತ |
| 1 | ಶ್ರೀ ಸುರೇಶ್ ತಳವಾರ್ , ಆಯ್ಕೆ ಶ್ರೇಣಿ ಉಪನ್ಯಾಸಕರು , SGEES Rural Polytechnic , ತಾರಿಹಾಳ ಇವರನ್ನು ನಿಲಂಬನೆಯಲ್ಲಿ ಇರಿಸಿದ್ದ ಆಡಳಿತ ಮಂಡಳಿಯವರ ಆದೇಶವನ್ನು ನಿರ್ದೇಶಕರು ದಿ:23-06-2017 ರಂದು ರದ್ದುಗೊಳಿಸಿರುವ ಆದೇಶದ ವಿರುದ್ಧ State Government Employees Education Society Hubballi ಮತ್ತಿತರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠ ಧಾರವಾಡ ಇಲ್ಲಿ ರಿಟ್ ಅರ್ಜಿ ಸಂ. 107635/017 ಅನ್ನು ಸಲ್ಲಿಸಿರುತ್ತಾರೆ. | ಪ್ರಕರಣವು ದಿನಾಂಕ: 23-01-2018 ರಂದು ವಿಚಾರಣೆಗೆ ಬಂದಿದ್ದು, ಮುಂದೂಡಲ್ಪಟ್ಟಿದೆ. |
| 2 | ಶ್ರೀ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜ್ , ಬಾಗಲಕೋಟೆ ಈ ಸಂಸ್ಥೆಯಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಸದಾಶಿವ ಕೆಂಭಾವಿ ಇವರು ತಮ್ಮನ್ನು ಸೇವೆಯಿಂದ ವಜಾಗೊಳಿಸಿರುವ ಆಡಳಿತ ಮಂಡಳಿಯವರ ಆದೇಶದ ವಿರುದ್ಧ ಮಾನ್ಯ ಇ.ಎ.ಟಿ, ಬಾಗಲಕೋಟೆ ಇಲ್ಲಿ ಪ್ರಕರಣ ಸಂಖ್ಯೆ: ಇಎಟಿ 4/2015 ರನ್ನು ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ಅರ್ಜಿದಾರರನ್ನು ಸೇವೆಯಲ್ಲಿ ಪುನರುತ್ಥಾನಗೊಳಿಸುವಂತೆ ಆದೇಶಿಸಲಾಗಿರುತ್ತದೆ. ಇಎಟಿ ಯ ಆದೇಶವನ್ನು ಪ್ರಶ್ನಿಸಿ ಪ್ರಿನ್ಸಿಪಾಲರು, ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು ಬಾಗಲಕೋಟೆ ಹಾಗೂ ಚೇರ ಮನ್, ಬಸವೇಶ್ವರ ವೀರ ಶೈವ ವಿದ್ಯಾವರ್ಧಕ ಸಂಘ ಬಾಗಲಕೋಟೆ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠ ಧಾರವಾಡ ಇಲ್ಲಿ ರಿಟ್ ಅರ್ಜಿ ಸಂ: 112521-22/2019 ರನ್ನು ದಾಖಲಿಸಿರುತ್ತಾರೆ. | ಮಾನ್ಯ ಉಚ್ಚ ನ್ಯಾಯಾಲಯವು ಮಾನ್ಯ ಇಎಟಿ ಯ ಆದೇಶಕ್ಕೆ ದಿ:-03-09-2019 ರಂದು ತಡೆಯಾಜ್ಞೆ ನೀಡಿದ್ದು, ಪ್ರಸ್ತುತ ಪ್ರಕರಣವು ದಿನಾಂಕ: 07-10-2021 ರಂದು ವಿಚಾರಣೆಗೆ ಬಂದಿದ್ದು, ಮುಂದೂಡಲ್ಪಟ್ಟಿದೆ. |
| 3 | ಶ್ರೀ ಜಗದೀಶ್ ಹೆಚ್ ಪೂಜಾರ್ , ಉಪನ್ಯಾಸಕರು, ಬಿ.ವಿ.ಬಿ ಹುಬ್ಬಳ್ಳಿ ಇವರು ತಮ್ಮನ್ನು ಸೇವೆಯಿಂದ ವಜಾ ಮಾಡಿರುವ ಆಡಳಿತ ಮಂಡಳಿಯ ಆದೇಶವನ್ನು ಪ್ರಶ್ನಿಸಿ ಮಾನ್ಯ ಇ.ಎ.ಟಿ ಧಾರವಾಡ ಇಲ್ಲಿ ಅರ್ಜಿ ಸಂಖ್ಯೆ: ಎಂ.ಎ.(ಇ.ಎ.ಟಿ) ನಂ: 1/2015 ಸಲ್ಲಿಸಿರುತ್ತಾರೆ. | ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುತ್ತದೆ |
| 4 | ಶ್ರೀ ಜಗದೀಶ್ ಹೆಚ್ ಪೂಜಾರ್, ಹುಬ್ಬಳ್ಳಿ ಇವರು ತಮ್ಮನ್ನು ಸೇವೆಯಿಂದ ವಜಾ ಮಾಡಿರುವ ಆಡಳಿತ ಮಂಡಳಿಯ ಆದೇಶವನ್ನು ಪ್ರಶ್ನಿಸಿ ಮಾನ್ಯ ಇ.ಎ.ಟಿ ಧಾರವಾಡ ಇಲ್ಲಿ ಅರ್ಜಿ ಸಂಖ್ಯೆ: ಎಂ.ಎ.(ಇ.ಎ.ಟಿ) ನಂ: 1/2015 ಸಲ್ಲಿಸಿರುತ್ತಾರೆ. ರಲ್ಲಿನ ಮಾನ್ಯ ನ್ಯಾಯಾಲಯವು I.A. No.14 & I.A.No.15 ರಲ್ಲಿ ನೀಡಿರುವ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಶ್ರೀ ಜಗದೀಶ್ ಹೆಚ್ ಪೂಜಾರ್ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠ ಇಲ್ಲಿ ಮೇಲ್ಕಂಡ ರಿಟ್ ಅರ್ಜಿ ಸಂ: 108477/2017 ಯನ್ನು | ಪ್ರಕರಣವು ದಿನಾಂಕ: 31-05-2021 ರಂದು ವಿಚಾರಣೆಗೆ ಬಂದಿದ್ದು, ಮುಂದೂಡಲ್ಪಟ್ಟಿದೆ |

| | | |
|---|---|---|
| | ದಾಖಲಿಸಿರುತ್ತಾರೆ. | |
| 5 | ಶ್ರೀ.ನಯನಕುಮಾರ್, ಉಪನ್ಯಾಸಕರು, ಎನ್ ಆರ್ ಎ ಎಂ ಪಾಲಿಟೆಕ್ನಿಕ್, ನಿಟ್ಟೆ ತಮ್ಮನ್ನು ಆಡಳಿತ ಮಂಡಳಿಯವರು ಸೇವೆಯಿಂದ ವಜಾ ಮಾಡಿರುವುದನ್ನು ರದ್ದುಗೊಳಿಸುವಂತೆ ಕೋರಿರ ಮಾನ್ಯ ಎಜುಕೇಷನ್‌ಅಪಲೇಟ್‌ಟ್ರಿಬ್ಯೂನಲ್ ಮತ್ತು ಜಿಲ್ಲಾ ನ್ಯಾಯಧೀಶರ ನ್ಯಾಯಾಲಯ, ದಕ್ಷಿಣಕನ್ನಡ, ಮಂಗಳೂರು ಇಲ್ಲಿ ದಾವೆ ಸಂಖ್ಯೆ: (ಇಎಟಿ) 1/2015 ಯನ್ನು ಸಲ್ಲಿಸಿರುತ್ತಾರೆ. | ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುತ್ತದೆ |